*RNI No. KARBIL/2001/47147*

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| ಭಾಗ-I<br>*Part-I* | ಬೆಂಗಳೂರು, ಮಂಗಳವಾರ, ಆಗಸ್ಟ್ ೮, ೨೦೧೭ (ಶ್ರಾವಣ ೧೭, ಶಕ ವರ್ಷ ೧೯೩೯)<br>***Bengaluru, Tuesday, August 8, 2017 (Shravana 17, Shaka Varsha 1939)*** | ನಂ. ೭೫೦<br>***No. 750*** |
|---|---|---|



**ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು**

ವಾಣಿಜ್ಯ ತೆರಿಗೆಗಳ ಕಾರ್ಯಾಲಯ, ಗಾಂಧಿನಗರ, ಬೆಂಗಳೂರು

**ವಿಷಯ:** ವಾಣಿಜ್ಯ ತೆರಿಗೆಗಳ ಇಲಾಖೆಯ ಆಯುಕ್ತರ ಕಛೇರಿಯ ಕೆಲವು ಹುದ್ದೆಗಳನ್ನು ಮರುನಾಮಕರಣ ಮಾಡುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಆಇ 121 ವಾತೆಸಿ 94 ಬೆಂಗಳೂರು, ದಿನಾಂಕ: 04.02.1995.

**ಪ್ರಸ್ತಾವನೆ:**

ಪ್ರಸ್ತುತ ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಯಲ್ಲಿ ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಸಿಬ್ಬಂದಿ-3) ಶಾಖೆಯಲ್ಲಿ ರಾಜ್ಯದ ಎಲ್ಲಾ ಅಧಿಕಾರಿ ಹಾಗೂ ನೌಕರರ ಜೇಷ್ಠತಾ ಪಟ್ಟಿ, ಅವುಗಳ ಪರಿಷ್ಕರಣೆ, ಈ ಸಂಬಂಧ ಕಾಲಕಾಲಕ್ಕೆ ನ್ಯಾಯಾಲಯಗಳಿಂದ ಬರುವ ಆದೇಶಗಳ ಪಾಲನೆ, ಕಛೇರಿ ಹಾಗೂ ಹುದ್ದೆಗಳ ಸ್ಥಳಾಂತರ, ಮರುನಾಮಕರಣ, ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ನಿರ್ವಹಣೆ ಹಾಗೂ ಪದೋನ್ನತಿಗೆ ಸಂಬಂಧಿಸಿದ ಕೆಲಸಕಾರ್ಯಗಳು ಇತ್ಯಾದಿ ಪ್ರಮುಖ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಈ ಶಾಖೆಗೆ ಪ್ರಸ್ತುತ ವಾಣಿಜ್ಯ ತೆರಿಗೆಗಳ ಉಪ ಆಯುಕ್ತರ ಜೊತೆಯಲ್ಲಿ ಒಂದು ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು ಹಾಗೂ ಒಂದು ವಾಣಿಜ್ಯ ತೆರಿಗೆ ಅಧಿಕಾರಿ ಹುದ್ದೆ ಮಂಜೂರಾಗಿದ್ದು, ಕಾರ್ಯದ ಒತ್ತಡವನ್ನು ಗಮನಿಸಿದಾಗ ಸದರಿ ಶಾಖೆಗೆ ಇನ್ನೊಂದು ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರ ಹುದ್ದೆಯ ಅವಶ್ಯಕತೆ ಇರುವುದು ಕಂಡುಬರುತ್ತದೆ. ಆದ್ದರಿಂದ ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಗೆ ಮಂಜೂರಾಗಿರುವ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಆಂತರಿಕ ಲೆಕ್ಕಪರಿಶೋಧನೆ-2) ಹುದ್ದೆಯನ್ನು ಸ್ಥಳಾಂತರಿಸಿ, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಸಿಬ್ಬಂದಿ-2) ಎಂದು ಮರುನಾಮಕರಣಗೊಳಿಸಲು ಪ್ರಸ್ತಾಪಿಸಲಾಗಿದೆ.

ಈ ರೀತಿ ಮರುನಾಮಕರಣಗೊಳಿಸಿದ ನಂತರ ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಗೆ ಆಂತರಿಕ ಲೆಕ್ಕಪರಿಶೋಧನೆ ಮತ್ತು ತಪಾಸಣೆ ಶಾಖೆಯ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರುಗಳ ಹಾಗೂ ವಾಣಿಜ್ಯ ತೆರಿಗೆ

ಅಧಿಕಾರಿಗಳ ವೃಂದದ ಪದನಾಮವು ಅನುಕ್ರಮಣಿಕೆಯಲ್ಲಿ ಮುಂದುವರೆಸಿದಲ್ಲಿ, ಅವುಗಳನ್ನು ಸುಲಭವಾಗಿ ಗುರುತಿಸಬಹುದೆಂಬ ಉದ್ದೇಶದಿಂದಾಗಿ, ಅವುಗಳನ್ನು ಸಹ ಅನುಕ್ರಮವಾಗಿ ಮರುನಾಮಕರಣಗೊಳಿಸಲು ಪ್ರಸ್ತಾಪಿಸಲಾಗಿದೆ.

ಮುಂದುವರೆದು, ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಯಲ್ಲಿ ಕೆಲವು ಹುದ್ದೆಗಳ ಪದನಾಮಗಳು ಆ ಹುದ್ದೆಗಳು ನಿರ್ವಹಿಸುವ ಕಾರ್ಯಗಳಿಗೆ ಅನುಗುಣವಾಗಿರುವುದಿಲ್ಲ. ಕಾಲಕ್ರಮೇಣ ಈ ಹುದ್ದೆಗಳು ನಿರ್ವಹಣೆ ಮಾಡುತ್ತಿರುವ ಕಾರ್ಯಗಳಲ್ಲಿ ಬದಲಾವಣೆ ಆಗಿರುವುದರಿಂದ ಹಾಗೂ ಪ್ರಸ್ತುತ ಬದಲಾದ ಸನ್ನಿವೇಶಗಳಿಗೆ ಅನುಗಣವಾಗಿ ಈ ಹುದ್ದೆಗಳು ನಿರ್ವಹಿಸಬೇಕಾದ ಕಾರ್ಯಗಳಲ್ಲಿ ನವೀಕರಣವಾಗುತ್ತಿರುವುದರಿಂದ, ಈ ಹುದ್ದೆಗಳ ಮರುನಾಮಕರಣ ಮಾಡುವ ಅವಶ್ಯಕತೆ ಇರುತ್ತದೆ. ಆದುದರಿಂದ, ಅಂತಹ ಹುದ್ದೆಗಳ ಪದನಾಮಗಳನ್ನು ಅವುಗಳು ನಿರ್ವಹಿಸುವ ಕಾರ್ಯಗಳಿಗೆ ಅನುಗುಣವಾಗಿ ಮರುನಾಮಕರಣಗೊಳಿಸಲು ಪ್ರಸ್ತಾವಿಸಲಾಗಿದೆ.

ಮೇಲೆ ಪ್ರಸ್ತಾಪಿಸಿದ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಸಿಬ್ಬಂದಿ–3/3.ಎಫ್/ಸಿ.ಆರ್–8/17–18, ದಿನಾಂಕ: 07.08.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಿತ್ವಿಕ್ ಪಾಂಡೆ, ಭಾ.ಆ.ಸೇ., ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಆದ ನಾನು ಉಲ್ಲೇಖದ ಸರ್ಕಾರದ ಆದೇಶದಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ, ಈ ಆದೇಶದ ಅನುಬಂಧದಲ್ಲಿ ಕಾಣಿಸಿರುವ ಕೋಷ್ಟಕದ ಅಂಕಣ (3) ರಲ್ಲಿನ ಹುದ್ದೆಗಳನ್ನು ಅಂಕಣ (4) ರಂತೆ ಮರುನಾಮಕರಣಗೊಳಿಸಿ ಆದೇಶಿಸಲಾಗಿದೆ. ಈ ರೀತಿ ಮರುನಾಮಕರಣಗೊಳಿಸಿದ ಹುದ್ದೆಗಳ ಹೊಸ ಪದನಾಮಗಳನ್ನು ಆಂಗ್ಲ ಭಾಷೆಯಲ್ಲಿ ಅಂಕಣ (5) ರಂತೆ ತೋರಿಸಲಾಗಿದೆ. ಸದರಿ ಹುದ್ದೆಗಳು ಈ ಹಿಂದಿನಂತೆ ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಯಲ್ಲಿಯೇ ಮುಂದುವರೆಯಲಿದ್ದು, ವಾಣಿಜ್ಯ ತೆರಿಗೆಗಳ ಆಯುಕ್ತರೇ ವೇತನ ಬಟವಾಡೆ ಅಧಿಕಾರಿ/ ನಿಯಂತ್ರಣಾಧಿಕಾರಿಯಾಗಿ ಮುಂದುವರೆಯುತ್ತಾರೆ.

ಈ ಆದೇಶವು ತಕ್ಷಣದಿಂದ ಜಾರಿಗೆ ಬಂದಿದ್ದು, ಮುಂದಿನ ಆದೇಶದವರೆಗೆ ಚಾಲ್ತಿಯಲ್ಲಿರುತ್ತದೆ.

**ರಿತ್ವಿಕ್ ಪಾಂಡೆ**
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು

# ಅನುಬಂಧ

## ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಬೆಂಗಳೂರು ಈ ಕಛೇರಿಯಲ್ಲಿನ ಕೆಲವು ಅಧಿಕಾರಿವೃಂದದ ಹುದ್ದೆಗಳ ಮರುನಾಮಕರಣ

### ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರ ವೃಂದ

| ಕ್ರ.ಸಂ. | ಕಛೇರಿ | ಮಂಜೂರಾಗಿರುವ ಹುದ್ದೆಯ ಪ್ರಸ್ತುತ ಪದನಾಮ | ಮರುನಾಮಕರಣದ ನಂತರ ಹುದ್ದೆಯ ಪದನಾಮ | ಆಂಗ್ಲ ಭಾಷೆಯಲ್ಲಿ ಮರುನಾಮಕರಣದ ನಂತರ ಪದನಾಮ |
|---|---|---|---|---|
| **1** | **2** | **3** | **4** | **5** |
| 1 | ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಬೆಂಗಳೂರು | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾಗೃತಿ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಪರಿಷ್ಕರಣೆ ಮತ್ತು ವಸೂಲಿ), ಬೆಂಗಳೂರು | Additional Commissioner of Commercial Taxes (Revision and Recovery), Bengaluru |
| 2 | ಮೇಲಿನಂತೆ | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಸರಕು ಮತ್ತು ಸೇವಾ ತೆರಿಗೆ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಇ–ಆಡಳಿತ), ಬೆಂಗಳೂರು | Additional Commissioner of Commercial Taxes (e-Governance), Bengaluru |
| 3 | ಮೇಲಿನಂತೆ | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಗುಪ್ತವಾರ್ತೆ ಮತ್ತು ಸಮನ್ವಯ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಲೆಕ್ಕಪರಿಶೋಧನೆ), ಬೆಂಗಳೂರು | Additional Commissioner of Commercial Taxes (Audit), Bengaluru |

### ವಾಣಿಜ್ಯ ತೆರಿಗೆಗಳ ಉಪ ಆಯುಕ್ತರ ವೃಂದ

| ಕ್ರ.ಸಂ. | ಕಛೇರಿ | ಮಂಜೂರಾಗಿರುವ ಹುದ್ದೆಯ ಪ್ರಸ್ತುತ ಪದನಾಮ | ಮರುನಾಮಕರಣದ ನಂತರ ಹುದ್ದೆಯ ಪದನಾಮ | ಆಂಗ್ಲ ಭಾಷೆಯಲ್ಲಿ ಮರುನಾಮಕರಣದ ನಂತರ ಪದನಾಮ |
|---|---|---|---|---|
| **1** | **2** | **3** | **4** | **5** |
| 1 | ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಬೆಂಗಳೂರು | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಜಾಗೃತಿ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಪರಿಷ್ಕರಣೆ ಮತ್ತು ವಸೂಲಿ), ಬೆಂಗಳೂರು | Deputy Commissioner of Commercial Taxes (Revision and Recovery), Bengaluru |
| 2 | ಮೇಲಿನಂತೆ | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಗುಪ್ತವಾರ್ತೆ ಮತ್ತು ಸಮನ್ವಯ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಲೆಕ್ಕಪರಿಶೋಧನೆ), ಆಯುಕ್ತರ ಕಛೇರಿ, ಬೆಂಗಳೂರು | Deputy Commissioner of Commercial Taxes (Audit), Commissioner's office, Bengaluru |
| 3 | ಮೇಲಿನಂತೆ | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಕೇಂದ್ರ ಕಛೇರಿ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಕಾರ್ಯನೀತಿ & ಕಾನೂನು), ಬೆಂಗಳೂರು | Deputy Commissioner of Commercial Taxes (Policy & Law), Bengaluru |
| 4 | ಮೇಲಿನಂತೆ | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಸ್ಪಷ್ಟೀಕರಣ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಮುಂಗಡ ನಿರ್ಣಯ), ಬೆಂಗಳೂರು | Deputy Commissioner of Commercial Taxes (Advance Ruling), Bengaluru |

ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರ ವೃಂದ

| ಕ್ರ.ಸಂ. | ಕಛೇರಿ | ಮಂಜೂರಾಗಿರುವ ಹುದ್ದೆಯ ಪ್ರಸ್ತುತ ಪದನಾಮ | ಮರುನಾಮಕರಣದ ನಂತರ ಹುದ್ದೆಯ ಪದನಾಮ | ಆಂಗ್ಲ ಭಾಷೆಯಲ್ಲಿ ಮರುನಾಮಕರಣದ ನಂತರ ಪದನಾಮ |
|---|---|---|---|---|
| 1 | 2 | 3 | 4 | 5 |
| 1 | ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಬೆಂಗಳೂರು | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂದ್ರ ಕಛೇರಿ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಪರಿಷ್ಕರಣೆ ಮತ್ತು ವಸೂಲಿ), ಬೆಂಗಳೂರು | Assistant Commissioner of Commercial Taxes (Revision and Recovery), Bengaluru |
| 2 | ಮೇಲಿನಂತೆ | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಗುಪ್ತವಾರ್ತೆ ಮತ್ತು ಸಮನ್ವಯ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಲೆಕ್ಕಪರಿಶೋಧನೆ), ಆಯುಕ್ತರ ಕಛೇರಿ, ಬೆಂಗಳೂರು | Assistant Commissioner of Commercial Taxes (Audit), Commissioner's office, Bengaluru |
| 3 | ಮೇಲಿನಂತೆ | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಆಂತರಿಕ ಲೆಕ್ಕಪರಿಶೋಧನೆ-2), ಬೆಂಗಳೂರು | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಸಿಬ್ಬಂದಿ-2), ಬೆಂಗಳೂರು | Assistant Commissioner of Commercial Taxes (Personnel-2), Bengaluru |
| 4 | ಮೇಲಿನಂತೆ | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಆಂತರಿಕ ಲೆಕ್ಕಪರಿಶೋಧನೆ-3), ಬೆಂಗಳೂರು | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಆಂತರಿಕ ಲೆಕ್ಕಪರಿಶೋಧನೆ-2), ಬೆಂಗಳೂರು | Assistant Commissioner of Commercial Taxes (Internal Audit-2), Bengaluru |

ವಾಣಿಜ್ಯ ತೆರಿಗೆ ಅಧಿಕಾರಿ ವೃಂದ

| ಕ್ರ.ಸಂ. | ಕಛೇರಿ | ಮಂಜೂರಾಗಿರುವ ಹುದ್ದೆಯ ಪ್ರಸ್ತುತ ಪದನಾಮ | ಮರುನಾಮಕರಣದ ನಂತರ ಹುದ್ದೆಯ ಪದನಾಮ | ಆಂಗ್ಲ ಭಾಷೆಯಲ್ಲಿ ಮರುನಾಮಕರಣದ ನಂತರ ಪದನಾಮ |
|---|---|---|---|---|
| 1 | 2 | 3 | 4 | 5 |
| 1 | ಮೇಲಿನಂತೆ | ವಾಣಿಜ್ಯ ತೆರಿಗೆ ಅಧಿಕಾರಿ (ಆಂತರಿಕ ಲೆಕ್ಕಪರಿಶೋಧನೆ-3), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಆಂತರಿಕ ಲೆಕ್ಕಪರಿಶೋಧನೆ-2), ಬೆಂಗಳೂರು | Commercial Tax Officer (Internal Audit-2), Bengaluru |

ವಾಣಿಜ್ಯ ತೆರಿಗೆಗಳ ಆಯುಕ್ತರು,
ಕರ್ನಾಟಕ, ಬೆಂಗಳೂರು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 100